**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ14.01.2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

ನಾನು ಬೇಲೂರಿನಲ್ಲಿ 1992 ರಿಂದ ವಕೀಲ ವೃತ್ತಿ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ 3 ರಿಂದ 5 ನೇ ಪ್ಯಾರದಲ್ಲಿ ಅನಿಲ್ ಕುಮಾರ ರವರ ಹೆಂಡತಿಯ ಹೆಸರು ಪಾರಣ ಎಂದು ನಮೂದು ಮಾಡಿರುತ್ತೇನೆ. ಆದರೆ ಅದು ಪಾವನ ಎಂದು ಇರುತ್ತದೆ. ನಿ ಡಿ 1 ಹಕ್ಕು ಖುಲಾಸೆ ಪತ್ರವನ್ನು ನನ್ನ ಕಚೇರಿಯಲ್ಲಿ ತಯಾರು ಮಾಡಿರುತ್ತೇನೆ. ಅದರಲ್ಲಿ ಇರುವ ಬರವಣಿಗೆ ನನ್ನದ್ದು ಆಗಿರುತ್ತದೆ. ಹಕ್ಕು ಖುಲಾಸೆ ಪತ್ರ ನೋಂದಾಣಿಯಾಗಬೇಕು ಎಂದರೆ ಸರಿ. ನಿ ಡಿ 1 ನ್ನು 1998 ರಲ್ಲಿ ಬರೆದಿರುತ್ತೇನೆ. ಪಕ್ಷಗಾರರಿಗೆ ಅದನ್ನು ನೋಂದಾಣಿ ಮಾಡಿಸಬೇಕೆಂದು ಹೇಳಿರುತ್ತೇನೆ. ನಿ ಡಿ 1 ಈವರೆಗೂ ನೋಂದಾಣಿಯಾಗಿಲ್ಲ ಎಂದರೆ ಸರಿ. ನಿ ಡಿ 1 ಬರೆಯುವಾಗ ಪಕ್ಷಗಾರರ ಪೋಟೋ ಅಂಟಿಸಬೇಕು ಎಂದು ಷರತ್ತು ಇರಲಿಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿ ಡಿ 1 ರ ಮೊದಲ 2 ಪುಟಗಳಲ್ಲಿ ಸಾಕ್ಷಿದಾರರ ಸಹಿ ಇರುವುದಿಲ್ಲ ಎಂದರೆ ಸರಿ. ನಿ ಡಿ 1 ರಲ್ಲಿ ಸಾಕ್ಷಿದಾರರ ಹೆಸರು, ವಿಳಾಸ ನಮೂದು ಮಾಡಿಲ್ಲ ಎಂದರೆ ಸರಿ. ರವೀಂದ್ರ, ಪ್ರೇಮಕುಮಾರು ಮತ್ತು ಮುರಳೀಧರ ರವರು ಸಾಕ್ಷಿದಾರರಾಗಿರುತ್ತಾರೆ. ಜಯಕುಮಾರ ರವರು ಸಹಿ ಮಾಡಿರುತ್ತಾರೆ. ಪಾವನ ರವರು ಒಬ್ಬರನ್ನು ಪ್ರೀತಿಸುತ್ತಿದ್ದರಿಂದ ಅವರಿಗೆ ಜೀವ ಬೆದರಿಕೆ ಇದುದ್ದರಿಂದ ನಿ ಡಿ 1 ನ್ನು ಬೇಲೂರಿನಲ್ಲಿ ಮಾಡಿಸಿರುತ್ತಾರೆ. ಅನಿಲ್ ಕುಮಾರ ಮತ್ತು ಪಾವನ ಬೇಲೂರಿನಲ್ಲಿ ವಾಸ ಇದ್ದರೋ ಇಲ್ಲವೋ ಗೊತ್ತಿಲ್ಲ. ನಿ ಡಿ 1 ದಾಖಲಾತಿಗೆ ಕಾನೂನಿನ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 1 ನ್ನು ಇತ್ತಿಚೇಗೆ ಈ ದಾವೆಗಾಗಿ ತರತೂರಿನಲ್ಲಿ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸ್ಟ್ಯಾಂಪ್ ಪೇಪರ್ ನ್ನು ಎಲ್ಲಿಂದ ತಂದಿರುತ್ತಾರೆ ಎಂದು ಗೊತ್ತಿಲ್ಲ. ದಾವ ಆಸ್ತಿಗೆ ಮತ್ತು ಅದೇ ಪಕ್ಷಗಾರರಿಗೆ ಸಂಬಂಧಪಟ್ಟಂತೆ ನಿ ಡಿ 1 ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ನಾನು ಮಾಡಿರುವುದಿಲ್ಲ.

ಪಕ್ಷಗಾರರ ಗುರುತಿನ ಚೀಟಿಯ ಆಧಾರದ ಮೇಲೆ ವಿಳಾಸ ಗುರುತು ಮಾಡಿರುತ್ತೇನೆ. ನಾನು ಬರವಣಿಗೆ ಮಾಡುವಾಗ ಅನಿಲ್ ಕುಮಾರ ರವರ ಇನಿಷಿಯಲ್ ನಮೂದು ಮಾಡಿಲ್ಲ

ಆದರೆ ಸಹಿ ಮಾಡುವಾಗ ಅವರು ಜೆ ಎಂದು ಸಹಿ ಮಾಡಿರುತ್ತಾರೆ. ನಿ ಡಿ 1 ರ 2 ನೇ ಪುಟದಲ್ಲಿ ತಾಯಿ ಎಂದು ಹೆಚ್ಚುವರಿ ಸೇರ್ಪಡೆ ಮಾಡಿರುವ ಬಗ್ಗೆ ಆ ಜಾಗದಲ್ಲಿ ಸಹಿ ಮಾಡಿರುವುದಿಲ್ಲ. ನನ್ನ ಸಮಕ್ಷಮ ಹಣಕಾಸು ವ್ಯವಹಾರವಾಗಿರುತ್ತದೆ. ಪ್ರೇಮಕುಮಾರ ರವರು ಅನಿಲ್ ಕುಮಾರ ರವರಿಗೆ 45 ಸಾವಿರ ಹಣ ನೀಡಿ ಬೇರೆ ಕಡೆ ಮನೆ ಮಾಡಿಕೊಂಡು ಜೀವನ ಮಾಡು ಎಂದು ತಿಳಿಸಿರುತ್ತಾರೆ. ಆನೇಮಹಲ್ ನಲ್ಲಿರುವ 17 ಗುಂಟೆ ಜಮೀನು ಎಂದು ತಿಳಿಸಿರುತ್ತಾರೆ. ಆದರೆ ಸರ್ವೆ ನಂಬರ್ ತಿಳಿಸಿರುವುದಿಲ್ಲ. ಮನೆಯ ವಿಸ್ತೀರ್ಣ ತಿಳಿಸಿರುವುದಿಲ್ಲ. 5 ನೇ ಪ್ರತಿವಾದಿಯ ಒತ್ತಾಯದ ಮೇರೆಗೆ ನಾನು ನಿ ಡಿ 1 ನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಾವನ ಎಂಬುವವರು ಯಾರು ಇರುವುದಿಲ್ಲ ಎಂದರೆ ಸರಿಯಲ್ಲ. ಅವರನ್ನು ಈ ಪ್ರಕರಣಕ್ಕೆ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಅನಿಲ್ ಕುಮಾರ ರವರು ಈಗ ಮರಣ ಹೊಂದಿರುತ್ತಾರೆ. ಪಾವನ ರವರು ಜೀವಂತ ಇರುತ್ತಾರೆ. ಒಂದು ವೇಳೆ ಪಾವನ ರವರು ಇದ್ದರೆ ನ್ಯಾಯಾಲಯಕ್ಕೆ ಬಂದು ನಿ ಡಿ 1 ರಲ್ಲಿ ತಮ್ಮ ಸಹಿಯನ್ನು ಗುರುತಿಸಬಹುದು. ಆದರೆ ಅವರು ಎಲ್ಲಿ ಇರುತ್ತಾರೆಂದು ಗೊತ್ತಿಲ್ಲ. ಸೃಷ್ಠಿ ಮಾಡಿದ ನಿ ಡಿ 1 ಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**